**ಕರ್ನಾಟಕ ಸರ್ಕಾರ ನಡವಳಿಗಳು**

ವಿಷಯ : **2018-19ನೇ** ಸಾಲಿನಲ್ಲಿ 2013-14 ರಿಂದ 2017-18ನೇ ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಮತ್ತು ಟರ್ನ ಕೀ ಫೀ ನಿರ್ವಹಣ ವೆಚ್ಚವನ್ನು ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2013-ಬಿಇ(ಪಿಟಿ) ದಿನಾಂಕ **29.08.2018** & **28.07.2018**.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5-40/2013-ಬಿಇ, ದಿನಾಂಕ **29.08.2018.**
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 44 ಜೈಅಯೋ 2018 ದಿನಾಂಕ **23.08.2018**
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ ರವರ ಪತ್ರ ಸಂಖ್ಯೆ ಜಿಪಂಅ/ಗ್ರಾಇಸೌ/ ಜೈಅಯೋ/ಸಿಆರ್-08/2018-19, ದಿನಾಂಕ 16.07.2018.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ರವರ ಪತ್ರ ಸಂಖ್ಯೆ ಉಜಿಪಂ/ಅಭಿವೃದ್ಧಿ/ಸಿಆರ್-1/2017-18, ದಿನಾಂಕ 06.02.2018.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ರಾಮನಗರ ರವರ ಪತ್ರ ಸಂಖ್ಯೆ ರಾಜಿಪಂ/ಜೈಅಯೋ-01-2018-19, ದಿನಾಂಕ 30.07.2018.
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್ ರವರ ಇ-ಮೇಲ್ ದಿನಾಂಕ 18.07.2018.

**ಪ್ರಸ್ತಾವನೆ :**

ಮೇಲೆ (1) & (2)ರಲ್ಲಿ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿಯು 2013-14ನೇ ಸಾಲಿಗೆ ಸಂಬಂಧಿಸಿದಂತೆ ಕೇಂದ್ರ ಸಹಾಯಧನ ರೂ.70.86ಲಕ್ಷಗಳನ್ನು ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ (Public Financial Management System-PFMS) ಬಿಡುಗಡೆ ಮಾಡಿದೆ. ಈ ಪೈಕಿ ಉಡುಪಿ ಜಿಲ್ಲಾ ಪಂಚಾಯತ್‌ಗೆ ಓದಲಾದ (3) ರಲ್ಲಿ ರೂ.15.57 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ರೂ.55.29 ಲಕ್ಷಗಳ ಕೇಂದ್ರ ಸಹಾಯಧನ ಬಿಡುಗಡೆಗೆ ಲಭ್ಯವಿರುತ್ತದೆ.

ಮೇಲೆ (3) ರಿಂದ (6)ರವರೆಗೆ ಓದಲಾದಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ, ಬೀದರ್, ಉಡುಪಿ ಮತ್ತು ರಾಮನಗರ ರವರ ಕೋರಿಕೆಯನ್ವಯ 2013-14ನೇ ಸಾಲಿನಿಂದ 2017-18ನೇ ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಸಂಬಂಧಿಸಿದಂತೆ ರೂ.59.16ಲಕ್ಷಗಳ ಕೇಂದ್ರ ಸಹಾಯಧನ ಹಾಗೂ ಟರ್ನ ಕೀ ಫೀ ನಿರ್ವಹಣೆ ವೆಚ್ಚ ಪಾವತಿಸಲು ಬಾಕಿ ಇರುತ್ತದೆ.

ಕಾರ್ಯಕ್ರಮದಡಿ ಲಭ್ಯವಿರುವ ಅನುದಾನ ಹಾಗೂ ಬಿಡುಗಡೆಗೆ ಬಾಕಿ ಇರುವ ಅನುದಾನ ಸೇರಿದಂತೆ ಒಟ್ಟಾರೆ ರೂ.57.16 ಲಕ್ಷಗಳನ್ನು 2013-14ನೇ ಸಾಲಿನಿಂದ 2017-18ನೇ ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ ಕೀ ಫೀ ನಿರ್ವಹಣ ವೆಚ್ಚ ಪಾವತಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ವಿಜಯಪುರ, ಬೀದರ್, ಉಡುಪಿ ಮತ್ತು ರಾಮನಗರ ರವರಿಗೆ ಅನುದಾನದ ಮಿತಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/44/ಜೈಅಯೋ/2018 ಬೆಂಗಳೂರು, ದಿನಾಂಕ 04.10.2018**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2018-19ನೇ** ಸಾಲಿನಲ್ಲಿ 2013-14ನೇ ಸಾಲಿನಿಂದ 2017-18ನೇ ಸಾಲಿನವರೆಗೆ ರಾಷ್ಟ್ರೀಯ ಜೈವಾನಿಲ ಗೊಬ್ಬರ ಮತ್ತು ನಿರ್ವಹಣೆ(NBMMP) ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಬಾಕಿ ಇರುವ ಕೇಂದ್ರ ಸಹಾಯಧನ ಹಾಗೂ ಟರ್ನ ಕೀ ಫೀ ನಿರ್ವಹಣ ವೆಚ್ಚವನ್ನು ಮಾರ್ಗಸೂಚಿಯನ್ವಯ ನಿಯಮಾನುಸಾರ ಪರಿಶೀಲಿಸಿ ಪಾವತಿಸಲು **ರೂ.57.16ಲಕ್ಷ(ಐವತ್ತೇಳು ಲಕ್ಷದ ಹದಿನಾರು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಈ ಕೆಳಕಂಡ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ.

| ಕ್ರ.ಸಂ | ಜಿಲ್ಲಾ ಪಂಚಾಯತ್ | ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|
| 1 | ಬೀದರ್ | 9.83 |
| 2 | ರಾಮನಗರ (*) | 1.04 |
| 3 | ಉಡುಪಿ | 15.18 |
| 4 | ವಿಜಯಪುರ | 31.11 |
| | **ಒಟ್ಟು** | **57.16** |

(*) ಅನುದಾನ ಮಿತಿಗೊಳಪಟ್ಟು ಬಿಡುಗಡೆ ಮಾಡಿದೆ

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟು ಬಿಡುಗಡೆ ಮಾಡಲಾಗುತ್ತಿದ್ದು, ಉದ್ದೇಶಿತ ಕಾರ್ಯಕ್ರಮಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಹಾಗೂ ವ್ಯಪಗತ ಮಾಡತಕ್ಕದಲ್ಲ.

ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಸದರಿ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕದಡಿ ಇಂಧೀಕರಿಸಿ ಬಿಡುಗಡೆ ಮಾಡತಕ್ಕದ್ದು. ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು ಲೆಕ್ಕ ಶೀರ್ಷಿಕೆ **2810-60-196-6-01**ರಡಿ ವೆಚ್ಚ ಭರಿಸಿ, ನಿಗದಿತ ನಮೂನೆಯಲ್ಲಿ ಹಣಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ನೀಡುವುದು

ಈ ಆದೇಶವನ್ನು ಇಲಾಖಾ ಅಂತರಿಕ ಆರ್ಥಿಕ ಸಲಹೆಗಾರರ ಸಹಮತಿ ಸಂಖ್ಯೆ: **ಗ್ರಾಅಪ 317 ಪಿಬಿಎಸ್ 2018, ದಿನಾಂಕ 22.09.2018**ರಲ್ಲಿ ಸಹಮತಿಯನ್ನು ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್ ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ / ಮುಖ್ಯ ಲೆಕ್ಕಾಧಿಕಾರಿ. ಜಿಲ್ಲಾ ಪಂಚಾಯತ್, ವಿಜಯಪುರ, ಬೀದರ್, ಉಡುಪಿ ಮತ್ತು ರಾಮನಗರ
3. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು(ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಅಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.